ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗಾಗಲೇ ೧.೭೦ ಕೋಟಿಯಷ್ಟು ಪುಸ್ತಕಗಳನ್ನು ಸಪ್ಲೈ ಮಾಡಿದ್ದೇವೆಂದು ಹೇಳಿದರು. ಈಗ ಶೇಕಡಾ ೫೦ ರಷ್ಟು ಪಾಠಶಾಲೆಗಳಿಗೆ ಪಠ್ಯ ಪುಸ್ತಕಗಳನ್ನು ಇನ್ನೂ ಒದಗಿಸಿಲ್ಲ. ಪಠ್ಯಪುಸ್ತಕ ಆಫೀಸ್ ಅಲ್ಲ, ಲೇಖಿಕ್ ಪುಸ್ತಕಗಳನ್ನು ಸಹ ಬಹಳಷ್ಟು ಸ್ಕೂಲುಗಳಿಗೆ ಒದಗಿಸಿಲ್ಲ. ಪಾಠಶಾಲೆಗಳಿಗೆ ಮಕ್ಕಳು ಬರೀ ಕೈಯಲ್ಲಿ ಹೋಗಿ ಬರುತ್ತಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸಚಿವರಿಗೆ ಈ ತರಹ ಪೇಪರ್ ಸಿಕ್ಕುತ್ತಿಲ್ಲ ಎನ್ನುವ ಬಗ್ಗೆ ನಾನು ಮೂರು ತಿಂಗಳ ಕೆಳಗೆ ಕಾಗದವನ್ನು ಬರೆದಿದ್ದೆ, ಪಾಠಶಾಲೆಗಳು ಪ್ರಾರಂಭವಾಗುವ ಹೊತ್ತಿಗೆ ಪುಸ್ತಕಗಳು ಸಿಕ್ಕದೆ, ಮಕ್ಕಳು ಬಹಳ ತೊಂದರೆ ಪಡುತ್ತಾರೆ, ಪುಸ್ತಕಗಳು ಮಾರುಕಟ್ಟೆಯಲ್ಲಿ ಸಿಕ್ಕುವಂಥ ವ್ಯವಸ್ಥೆ ಮಾಡಬೇಕೆಂದು ತಿಳಿಸಿದ್ದೆ. ಆದರೂ ಕ್ರಮ ತೆಗೆದುಕೊಳ್ಳಲಿಲ್ಲ. ಮಾನ್ಯ ಸದಸ್ಯರಾದ ರಾಮಸ್ವಾಮಿಯವರು ಮಾತನಾಡುವಾಗ ಕೆಲವು ಮಕ್ಕಳು ಪುಸ್ತಕಗಳನ್ನು ಕಳೆದುಕೊಳ್ಳುತ್ತಾರೆ, ಕೆಲವರು ಹಾಳು ಮಾಡಿಕೊಳ್ಳುತ್ತಾರೆ, ಅಂತಹವರಿಗೆ ಮಾರುಕಟ್ಟೆಯಲ್ಲಿ ಪುಸ್ತಕಗಳು ಸಿಕ್ಕುವುದಿಲ್ಲ. ಅವರು ಯಾರಿಂದ ಕೊಂಡುಕೊಳ್ಳಬೇಕು ಎಂದು ಪ್ರಶ್ನೆ ಮಾಡಿ ಕೇಳಿದರು. ಪುಸ್ತಕಗಳನ್ನು ಕಳೆದುಕೊಂಡ ಮಕ್ಕಳು ಅಧೋಗತಿಯಾಗುತ್ತಾರೆ, ಅವರಿಗೆ ಕಷ್ಟವಾಗುತ್ತದೆ, ಆ ರೀತಿ ಪುಸ್ತಕಗಳನ್ನು ಕಳೆದುಕೊಂಡಂಥ ಮಕ್ಕಳಿಗೆ ಪುಸ್ತಕಗಳನ್ನು ಒದಗಿಸಲಿಕ್ಕೆ ವಿಶೇಷವೂ ಬೇರೆ ವ್ಯವಸ್ಥೆ ಮಾಡಿದ್ದಾರೆಯೇ ಎಂದು ಮಾನ್ಯ ವಿದ್ಯಾ ಸಚಿವರಲ್ಲಿ ಕೇಳುತ್ತೇನೆ?

ಶ್ರೀ ಕೆ.ಹೆಚ್. ರಂಗನಾಥ್.—ನಾನು ಆಗಲೇ ಇದರ ಬಗ್ಗೆ ಹೇಳಿದ್ದೇನೆ. ಪ್ರಿಂಟ್ ಮಾಡಬೇಕಾಗಿರತಕ್ಕಂತಹ ಪುಸ್ತಕಗಳ ಸಂಖ್ಯೆ ೧.೭೦ ಕೋಟಿಯಷ್ಟು, ಮಾತ್ರ ಆ ಕೆಲಸ ನಡೆಯುತ್ತಿದೆ. ತಾವು ಏನು ಪ್ರಸ್ತಾಪ ಮಾಡಿದ್ದೀರಿ ಅದನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಮಕ್ಕಳಿಗೆ ಯಾವುದೇ ರೀತಿಯಂತೊಂದರೆಯಾಗದ ರೀತಿಯಲ್ಲಿ ಪುಸ್ತಕದ ಪೂರೈಕೆ ಆಗುವುದಕ್ಕೆ ಸರಕಾರ ಪ್ರಯತ್ನ ಪಡುತ್ತದೆ.

೨. ಮುಳಬಾಗಿಲಿನಲ್ಲಿ ದಿನಾಂಕ ೨೦-೫-೯೦ ರಂದು ಉಂಟಾದ ಗುಂಪು ಘರ್ಷಣೆಯಿಂದ ನಷ್ಟಕ್ಕೊಳಗಾದವರಿಗೆ ಪರಿಹಾರ ನೀಡುವಂತೆ ಒತ್ತಾಯ

ಶ್ರೀ ಎಂ.ವಿ. ವೆಂಕಟಪ್ಪ.—ದಿನಾಂಕ ೨೦-೫-೯೦ ರಂದು ಮುಳಬಾಗಿಲಿನಲ್ಲಿ ಉಂಟಾದ ಗುಂಪು ಘರ್ಷಣೆಯಿಂದ ಜನರಿಗೆ ಉಂಟಾಗಿರುವ ನಷ್ಟದ ಬಗ್ಗೆ ಪರಿಹಾರ ನೀಡಲು ಸರಕಾರದವರು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸದರಿ ಗಲಭೆಯಲ್ಲಿ ಜನರ ಆಸ್ತಿ ಪಾಸ್ತಿಗಳಿಗೆ ಸುಮಾರು ರೂ. ೨೧,೯೦,೬೩೫-೦೦ ಗಳಷ್ಟು ನಷ್ಟ ಉಂಟಾಗಿದ್ದು ಈಗಾಗಲೇ ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳು ಸರ್ಕಾರಿ ಆದೇಶ ಸಂ. ಹೆಚ್.ಡಿ. ೨೨೮ ಎಸ್.ಎಸ್.ಟಿ ೮೯, ದಿನಾಂಕ ೨೫-೧೦-೯೦ ರ ಆನ್ವಯ ೧೪ ಜನರಿಗೆ ರೂ. ೧೬,೪೦೦-೦೦ ಗಳ ಮೊತ್ತದ ಪರಿಹಾರವನ್ನು ಮಂಜೂರು ಮಾಡಿರುತ್ತಾರೆ. ಅದೇ ರೀತಿ ಉಳಿದ ೬೭ ಜನರಿಗೆ ರೂ. ೫,೧೮,೬೦೩-೦೦ ಗಳ ಒಟ್ಟು ಮೊತ್ತದ ಪರಿಹಾರವನ್ನು ಮಂಜೂರು ಮಾಡಲು ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುವ ಪ್ರಕಾರ ಪರಿಹಾರ ಮಂಜೂರು ಮಾಡಲಾಗಿದೆ.

ಶ್ರೀ ಎಂ. ವಿ. ವೆಂಕಟಪ್ಪ.— ಕಂದಾಯ ಅಧಿಕಾರಿಗಳ ಅಂದಾಜಿನ ಪ್ರಕಾರ ೨೧೪ ಕೇಸುಗಳಿವೆ ಎಂದು ಇದ್ದು ಅವರು ೩೮.೭೮,೪೫೫ ರೂಪಾಯಿ ಪರಿಹಾರ ಕೊಡಬೇಕೆಂದು ಅಂದಾಜು ಮಾಡಿದ್ದಾರೆ. ಆದರೆ ಜಿಲ್ಲಾಧಿಕಾರಿಗಳು ೫,೧೪,೬೦೩ ರೂಪಾಯಿಗಳು ಎಂದು ಅಂದಾಜು ಮಾಡಿದ್ದಾರೆಂದು ಇದರಲ್ಲಿದೆ. ಇದರಲ್ಲಿ ಯಾವುದು ಸರಿ ಎಂಬುದನ್ನು ತಿಳಿಸಬೇಕು. ಇದರ ಜೊತೆಗೆ ಪರಿಹಾರವನ್ನು ಕೊಡಲಿಕ್ಕೆ ತಾವು ಹಾಕಿಕೊಂಡಿರುವಂತಹ ಗೈಡ್‌ಲೈನ್ಸ್ ಏನು? ತಾತ್ಕಾಲಿಕ ಪರಿಹಾರವನ್ನೇನಾದರೂ ಕೊಟ್ಟಿದ್ದೀರಾ? ರೆವಿನ್ಯೂ ಅಧಿಕಾರಿಗಳ ಅಂದಾಜಿನ ಪ್ರಕಾರ ಏನು ೩೮.೭೮ ಲಕ್ಷಕ್ಕೆ ರೂಪಾಯಿ ಪರಿಹಾರ ಕೊಡಬೇಕೆಂದು ಇದೆ ಅದನ್ನು ಆದಷ್ಟು ಬೇಗ ಕೊಡುವ ಪ್ರಯತ್ನ ಪಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.— ನಮಗೆ ಬಂದಿರುವ ವರದಿ ಪ್ರಕಾರ ಏನು ವಿವರವಿದೆ, ಅದನ್ನು ನಾನು ಇಲ್ಲಿ ಓದುತ್ತೇನೆ. ೨೧೯೦,೬೩೫ ರೂಪಾಯಿಗಳಷ್ಟು ಆಸ್ತಿಪಾಸ್ತಿಗಳು ಹಾನಿಯಾಗಿವೆ ಎಂದು ಅಂದಾಜು ಮಾಡಿದ್ದಾರೆ. ಅದರಲ್ಲಿ ಸ್ವಲ್ಪ ಹಣವನ್ನು ಅಂದರೆ ಜಿಲ್ಲಾಧಿಕಾರಿಯವರು ಎಷ್ಟು ಕೊಡಲು ಅಧಿಕಾರ ಇದೆಯೋ ಅಷ್ಟು ಹಣವನ್ನು ಕೊಟ್ಟಿದ್ದಾರೆ. ಇನ್ನು ೫,೧೮,೬೦೩ ರೂಪಾಯಿಗಳ ಪರಿಹಾರವನ್ನು ಮಂಜೂರು ಮಾಡಬೇಕೆಂದು ಪ್ರಪೋಸಲ್ ಕಳಿಸಿದರು, ಅದನ್ನು ಇದೇ ಮೂರನೇ ತಾರೀಖು ಮಂಜೂರು ಮಾಡಿದ್ದೇವೆ. ಆ ದುಡ್ಡು ಕೊಡಿಸಿಗುತ್ತದೆ. ಪರಿಹಾರವನ್ನು ಯಾವ ರೀತಿ ಕೊಡಬೇಕೆಂಬ ಬಗ್ಗೆ ಗೈಡ್‌ಲೈನ್ಸ್ ಇದೆ ಅದನ್ನು ಮಾನ್ಯ ಸದಸ್ಯರಿಗೆ ಕಳಿಸಿಕೊಡುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಕೇಂದ್ರಾಯ ಅಧಿಕಾರಿಗಳು ೩೮,೨೮,೪೩೫ ರೂಪಾಯಿ ಎಂದು ಅಂದಾಜು ಏನು ಮಾಡಿದ್ದಾರೆ ಅದರ ಕಾಪಿ ನನ್ನ ಹತ್ತಿರ ಇದೆ. ಅದಕ್ಕೆ ಸೀಲ್ ಸಿಗ್ನೇಚರ್ ಅನ್ನೂ ಕೂಡ ಹಾಕಿದ್ದಾರೆ. ಅದನ್ನು ತಮಗೆ ಕಳಿಸಿಕೊಡುತ್ತೇನೆ. ಮತ್ತು ಇನ್ನೋಸೆಂಟ್ ಪೀಪಲ್ಸ್ ಅನ್ನು ಏನು ಅರೆಸ್ಟ್ ಮಾಡಿದ್ದಾರೆ ಅವರನ್ನು ಬಿಡುಗಡೆ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳ ಫಂಡ್‌ನಿಂದ ೨–೩ ಲಕ್ಷ ರೂಪಾಯಿಗಳನ್ನು ಈ ಜನರಿಗೆ ಕೊಟ್ಟರೆ ಅನುಕೂಲವಾದೀತು ಎಂದು ನನ್ನ ಭಾವನೆ.

SRI VEERENDRA PATIL.— Sir it is a suggestion for action.

ನಿಯಮ ೫೫ಳಿರ ಮೇರೆಗೆ

(೧) ಬೆಂಗಳೂರು ಕೃಷ್ಣರಾಜೇಂದ್ರ ಮಾರುಕಟ್ಟೆಯ ಒಳಗೆ ಕುಡಿಯುವ ನೀರಿನ ಸೌಕರ್ಯವಿಲ್ಲದೆ ಜನರಿಗೆ ತೊಂದರೆಯಾಗಿರುವುದು

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.— ಬೆಂಗಳೂರು ಕೃಷ್ಣರಾಜೇಂದ್ರ ಮಾರುಕಟ್ಟೆಯ ಒಳಗಡೆ ಕುಡಿಯುವ ನೀರಿನ ಸೌಕರ್ಯವಿಲ್ಲದಿರುವುದರಿಂದ ಪ್ರತಿದಿನವೂ ಸಾವಿರಾರು ಜನರು ಹಾಗೂ ಮಾರುಕಟ್ಟೆಗೆ ತರಕಾರಿ ಹಣ್ಣುಗಳನ್ನು ಮಾರಲೂ ಬರತಕ್ಕ ರೈತರಿಗೆ ಬಹಳ ಅನಾನುಕೂಲವಾಗಿದೆ. ಆದ್ದರಿಂದ ಸರಕಾರದವರು ಕೂಡಲೇ ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯ ಒಳಗೆ ಕೆಲವು ಸಾರ್ವಜನಿಕ ಕೊಳಾಯಿಗಳನ್ನು ಹಾಕಿಸಿ ಈ ಮಾರುಕಟ್ಟೆಗೆ ಬರತಕ್ಕ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೇ ಕೆ. ಆರ್. ಮಾರ್ಕೆಟ್ಟಿಗೆ ಬಂದು ಹೋಗತಕ್ಕಂತಹ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಮಾನ್ಯ ಮಲ್ಲಪ್ಪನವರು ಏನೋ ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಗರಪಾಲಿಕೆಗೆ ಹಾಗೂ ಬೆಂಗಳೂರು ವಾಟರ್ ಸಪ್ಲೈ ಬೋರ್ಡಿನವರಿಗೆ ಯಥಾಪ್ರಕಾರ ಪಾಯಿಂಟ್‌ಗಳಲ್ಲಿ ಕೊಳಾಯಿಗಳನ್ನು ಹಾಕಬಹುದೆಂಬ ಬಗ್ಗೆ ಮಾರ್ಗ ಸೂಚಿಗಳನ್ನು ಹಾಕಿಕೊಡಿ ಎಂದು ಹೇಳುತ್ತೇನೆ. ಅವರು ವಿವರ ಕೊಟ್ಟ ತಕ್ಷಣ ಶೀಘ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

(೨) ಉಳ್ಳಾಲದಲ್ಲಿ ಕಡಲ ಕೊರೆತಕ್ಕೆ ತಡೆಗೋಡೆಯನ್ನು ನಿರ್ಮಿಸುವುದು ೧೨–೩೦ ಪಿ. ಎಂ.

ಶ್ರೀ ಜಿ.ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಅಧ್ಯಕ್ಷರೆ, ಮಂಗಳೂರು ಕರಾವಳಿಯ ಉಳ್ಳಾಲದಲ್ಲಿ ಕಳೆದ ೩ ವರ್ಷಗಳಿಂದ ಕಡಲು ಕೊರೆತದಿಂದ ನೂರಾರು ಮನೆಗಳು, ಪೆಡ್ಡುಗಳು ನಾಶವಾಗಿ ಅಪಾರ ಹಾನಿಯಾಗಿದೆ. ಈ ವರ್ಷ ನಮ್ಮಲ್ಲಿ ಮಳೆ ಪ್ರಾರಂಭವಾಗಿ ಕಡಲು ಕೊರೆತ ಪ್ರಾರಂಭವಾಗಿ ಅನೇಕ ಮನೆಗಳಿಗೆ ತೆರೆಗಳು ಬಡಿಯುತ್ತಿವೆ. ಉಳ್ಳಾಲ ಕಡಲು ಕರಿಯ ಜನರೆಲ್ಲಾ ಭಯಭೀತರಾಗಿದ್ದಾರೆ. ಪುನಃ ಅಪಾರ ಹಾನಿಯಾಗುವ ಆಪಾಯವಿರುತ್ತದೆ. ಈ ಕುರಿತು ೨ ವರ್ಷಗಳಿಂದ ಕಡಲು ಕೊರೆತ ತಡೆಯಲು ತಡೆಗೋಡೆ ಕಟ್ಟಿಸಿಕೊಡಬೇಕೆಂದು ಕೇಳುತ್ತಾ ಬರಲಾಗಿದೆ. ಕೂಡಲೇ ಕೆಲಸ ಪ್ರಾರಂಭಿಸಲಾಗುವುದೆಂದು ಹೇಳಲಾಗಿದೆ. ಮಾನ್ಯ ರಾಜ್ಯಪಾಲರ ಅಧಿಕಾರ ಇರುವಾಗ ರಾಜ್ಯಪಾಲರು ಖುದ್ದಾಗಿ ಉಳ್ಳಾಲಕ್ಕೆ ಬಂದು ಈ ಕರಾಳ ಪರಿಸ್ಥಿತಿಯನ್ನು ನೋಡಿ, ೨೦ ಲಕ್ಷ ರೂ. ಹಣವನ್ನು ತಂತ್ರಾಗಿ ಬಿಡುಗಡೆ ಮಾಡುವುದಾಗಿ ಹೇಳಿದ್ದರು. ಪತ್ರಿಕೆಗಳಲ್ಲಿ ಅದು ಪ್ರಕಟವಾಗಿದೆ. ಆದರೆ ಈವರೆಗೆ ಆ ಹಣ ಬಂದಿಲ್ಲ. ತಡೆಗೋಡೆ ಕೆಲಸ ಪ್ರಾರಂಭವಿಲ್ಲ. ಆದಕಾರಣ ಆತಿ ತುರ್ತಾಗಿ ಉಳ್ಳಾಲದಲ್ಲಿ ಕಡಲು ಕೊರೆತದ ಹಾವಳಿ ತಪ್ಪಿಸಲು ತಡೆಗೋಡೆ ಕಟ್ಟಲು ಆದೇಶ ನೀಡಿ ಕೆಲಸ ಪ್ರಾರಂಭಿಸಬೇಕು. ಈ ಕುರಿತು ನೀರಾವರಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಖಾತೆ ಸಚಿವರು)— ಕರ್ನಾಟಕ ರಾಜ್ಯದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಒಟ್ಟು ಕರಾವಳಿ ತೀರ ೩೦೦ ಕಿ. ಮೀ. ಇದ್ದು ಅಲ್ಲಲ್ಲಿ ಸಮುದ್ರ ಕೊರೆತದ ಹಾನಿಗೊಳಗಾದ ಒಟ್ಟು ೭೬ ಕಿ.ಮೀ. ತೀರ ಪ್ರದೇಶಗಳನ್ನು ಗುರುತಿಸಲಾಗಿದ್ದು ಇವುಗಳ ರಕ್ಷಣೆಗೆಂದು ಒಂದು ಸಮಗ್ರ ಯೋಜನೆಯನ್ನು ರೂ. ೧೪೫ ಕೋಟಿಗಳಿಗೆ ಸಿದ್ಧಪಡಿಸಲಾಗಿದೆ. ಇದನ್ನು ಅನುಮೋದನೆಗಾಗಿ ಭಾರತ ಸರ್ಕಾರದ